**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 269/2023**

| | | |
|---|---|---|
| ಸಾಕ್ಷಿದಾರರ ಹೆಸರು | : | ವಿಷಕಂಠಾಚಾರಿ ಬಿ. |
| ತಂದೆಯ ಹೆಸರು | : | ಬೆಟ್ಟಾಚಾರಿ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ನಿವೃತ್ತ ಪಿ.ಡಿ.ಒ. |
| ವಾಸಸ್ಥಳ | : | ಮುಷ್ಕೆರೆ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 27.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ-2 ರಿಂದ ಚಾಸಾ-11 ರವರ ಪರಿಚಯವಿರುತ್ತದೆ. ಚಾಸಾ-2 ಮತ್ತು ಚಾಸಾ-3 ರವರು ನಮ್ಮ ಪಂಚಾಯಿತಿಯಲ್ಲಿ ವಾಟರ್ ಮ್ಯಾನ್ ಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಚಾಸಾ-4 ನಮ್ಮ ಪಂಚಾಯಿತಿಯಲ್ಲಿ ಅಟೆಂಡರ್ ಆಗಿದ್ದರು. ಚಾಸಾ-5 ಕೊಡಸೀಗೆ ಗ್ರಾಮದ ಯಜಮಾನರು. ಚಾಸಾ-6 ರಿಂದ ಚಾಸಾ-9 ಮತ್ತು ಚಾಸಾ-11 ಕೊಡಸೀಗೆ ಗ್ರಾಮಸ್ಥರು. ಚಾಸಾ-10 ರವರು ಅಳತೆಗೆ ಅರ್ಜಿ ನೀಡಿದವರಾಗಿರುತ್ತಾರೆ.

ದಿನಾಂಕಃ 09.12.2022 ರಂದು ಚಾಸಾ-10 ರವರು ಕೊಡಸೀಗೆ ಗ್ರಾಮದ ಸ್ವತ್ತಿನ ಸಂಖ್ಯೆ: 41/40 ರ ಸ್ವತ್ತನ್ನು ಅಕ್ಕ-ಪಕ್ಕದವರು ಒತ್ತುವರಿ ಮಾಡಿಕೊಂಡಿರುವುದಾಗಿ

ಅರ್ಜಿ ನೀಡಿ ಒತ್ತುವರಿ ಬಿಡಿಸಿಕೊಡುವಂತೆ ಕೇಳಿಕೊಂಡಿರುತ್ತಾರೆ. ಆ ಪ್ರಕಾರ ನಾನು ದಿನಾಂಕಃ 12.12.2022 ರಂದು ಸದರಿ ಅರ್ಜಿಯ ಮೇಲೆ ಅಳತೆಯ ಸಂಬಂಧ ಬಾಜೂದಾರರಾದಂತಹ ಆರೋಪಿಗಳಿಗು ಮತ್ತು ಇತರರಿಗೆ ನೋಟೀಸ್ ಅನ್ನು ನೀಡಿ ದಿನಾಂಕಃ 19.12.2022 ರಂದು ಸರ್ವೆಗೆ ಹಾಜರಾಗುವಂತೆ ತಿಳಿಸಿರುತ್ತೇನೆ. ನಂತರ ದಿನಾಂಕಃ 19.12.2022 ರಂದು ನಾನು ಹಾಗು ನಮ್ಮ ಸಿಬ್ಬಂಧಿಗಳಾದ ಚಾಸಾ-2 ರಿಂದ ಚಾಸಾ-4 ರವರು ಅಳತೆಯ ಸಂಬಂಧ ಬೆಳಿಗ್ಗೆ ಸುಮಾರು 11.00-11.30 ಗಂಟೆಗೆ ಕೊಡಸೀಗೆ ಗ್ರಾಮಕ್ಕೆ ಹೋಗಿ ಗ್ರಾಮದ ವಾಸಿಯಾದ ದಸ್ತಗಿರ್ ಷರೀಫ್ ರವರ ಮನೆಯ ಬಳಿ ಹೋಗಿ ಅಳತೆ ಮಾಡಲು ಹೋದಾಗ ಆರೋಪಿಗಳು ಗುಂಪು ಕಟ್ಟಿಕೊಂಡು ಬಂದು ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಅಳತೆ ಮಾಡಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ. ನಂತರ ನಾವು ಕೆಲಸನ್ನು ನಿಲ್ಲಿಸಿ ಕಛೇರಿಗೆ ಹಿಂತಿರುಗಿರುತ್ತೇವೆ. ಆ ದಿನ ಸಂಜೆಯಾದ ಕಾರಣ ಮರುದಿನ ಅಂದರೆ ದಿನಾಂಕಃ 20.12.2022 ರಂದು ಪೋಲೀಸ್ ಠಾಣೆಗೆ ಹೋಗಿ ಈ ಬಗ್ಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ನಾನು ಆರೋಪಿಗಳ ವಿರುದ್ಧ ನೀಡಿದ ದೂರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ದೂರನ್ನು **ನಿ.ಪಿ.-1** ಎಂದು, ಸಾಕ್ಷಿಯ ಸಹಿಯನ್ನು **ನಿ.ಪಿ.-1(ಎ)** ಎಂದು ಗುರುತಿಸಲಾಯಿತು. ನಂತರ ಮರುದಿನ ಅಂದರೆ ದಿನಾಂಕಃ 21.12.2022 ರಂದು ಪೋಲೀಸರು ಕೃತ್ಯ ಸ್ಥಳಕ್ಕೆ ಬಂದು ನನ್ನ, ಚಾಸಾ-5 ಹಾಗು ಚಾಸಾ-11 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತಾರೆ. ಸದರಿ ಮಹಜರ್

ಅನ್ನು ಬೆಳಿಗ್ಗೆ ಸುಮಾರು 11.00-12.00 ಗಂಟೆಯವರೆಗೆ ಜರುಗಿಸಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಪೋಲೀಸರು ಜರುಗಿಸಿದ ಮಹಜರ್ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಮಹಜರ್ ಅನ್ನು **ನಿ.ಪಿ.-2** ಎಂದು, ಸಾಕ್ಷಿಯ ಸಹಿಯನ್ನು **ನಿ.ಪಿ.-2(ಎ)** ಎಂದು ಗುರುತಿಸಲಾಯಿತು. ನಾನು ಪೋಲೀಸರಿಗೆ ದೂರನ್ನು ನೀಡುವ ಸಮಯದಲ್ಲಿ ಚಾಸಾ-10 ರವರು ನೀಡಿದ ಅರ್ಜಿಯ ಪ್ರತಿಯನ್ನು ಹಾಗು ಸ್ವತ್ತಿನ ಸಂಖ್ಯೆ 41/40 ರ ಡಿಮ್ಯಾಂಡ್ ರಿಜಿಸ್ಟರ್ ನ ಧೃಡೀಕೃತ ನಕಲು, ನಮೂನೆ-9 ಮತ್ತು ನಮೂನೆ-11 ಎ ನ ಧೃಡೀಕೃತ ನಕಲು ಹಾಗು ಬಾಜೂದಾರರಿಗೆ ನೀಡಿದ ನೋಟೀಸ್ ಗಳ ಪ್ರತಿಗಳನ್ನು ನೀಡಿರುತ್ತೇನೆ. ಸಾಕ್ಷಿಗೆ 08 ದಾಖಲೆಗಳನ್ನು ತೋರಿಸಲಾಗಿ ಸಾಕ್ಷಿಯು ಅವುಗಳು ಮೇಲೆ ಹೇಳಿದಂತೆ ದೂರಿನ ಜೊತೆ ಪೋಲೀಸರಿಗೆ ನೀಡಿದ ದಾಖಲೆಗಳು ಎಂದು ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಚಾಸಾ-10 ರವರು ನೀಡಿದ ಅರ್ಜಿಯ ಧೃಡೀಕೃತ ನಕಲನ್ನು **ನಿ.ಪಿ.-3** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-3(ಎ)** ಎಂದು ಡಿಮ್ಯಾಂಡ್ ರಿಜಿಸ್ಟರ್ ಅನ್ನು **ನಿ.ಪಿ.-4** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-4(ಎ)** ಎಂದು ಗುರುತಿಸಲಾಯಿತು. ನಮೂನೆ-9 ಹಾಗು ನಮೂನೆಯ 11 ಎ ನ ಧೃಡೀಕೃತ ನಕಲನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ **ನಿ.ಪಿ.-5** ಮತ್ತು **ನಿ.ಪಿ.-6** ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ **ನಿ.ಪಿ.-5(ಎ)** ಮತ್ತು **ನಿ.ಪಿ.-6(ಎ)** ಎಂದು ಗುರುತಿಸಲಾಯಿತು. ನೋಟೀಸ್ ಗಳ ಧೃಡೀಕೃತ ನಕಲುಗಳನ್ನು

ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ **ನಿ.ಪಿ.-7 ರಿಂದ ನಿ.ಪಿ.**-10 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ **ನಿ.ಪಿ.-7(ಎ) ರಂದ ನಿ.ಪಿ.-10(ಎ)** ಎಂದು ಗುರುತಿಸಲಾಯಿತು. ಈ ಪ್ರಕರಣ ದಾಖಲಾದ ನಂತರ ಪೋಲೀಸರು ಸದರಿ ಘಟನೆಯು ದಿನ ಅಳತೆಗೆ ಹೋದ ಸಿಬ್ಬಂದಿಗಳ ವಿವರವನ್ನು ಕೊಡುವಂತೆ ತಿಳಿಸಿದ್ದ ಆ ಪ್ರಕಾರ ನಾನು ದಿನಾಂಕಃ 16.01.2023 ರಂದು ಸದರಿ ದಿನದಂದು ನನ್ನ ಜೊತಗೆ ಚಾಸಾ-2 ರಿಂದ ಚಾಸಾ-4 ರವರು ಅಳತೆ ಕಾರ್ಯಕ್ಕೆ ಬಂದ ಬಗ್ಗೆ ಧೃಡೀಕರಣ ಪತ್ರ ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ನೀಡಿದ ಧೃಡೀಕರಣ ಪತ್ರ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಧೃಡೀಕರಣ ಪತ್ರವನ್ನು **ನಿ.ಪಿ.-11** ಎಂದು, ಸಾಕ್ಷಿಯ ಸಹಿಯನ್ನು **ನಿ.ಪಿ.-11(ಎ)** ಎಂದು ಗುರುತಿಸಲಾಯಿತು. ನಾನು ಪೋಲೀಸರಿಗೆ ಈ ಬಗ್ಗೆ ಮುಂದುವರೆದ ಹೇಳಿಕೆಯನ್ನು ಸಹ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಗೈರು ಹಾಜರಾಗಿದ್ದು ಆರೋಪಿಗಳು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**